ತೆಗೆದು ಗುಂಡು ಹಾರಿಸಿ ಅವನನ್ನು ಕೊಂದೇ ಬಿಟ್ಟಿದ್ದ. ಅದನ್ನು ಓದಿದಾಗ ನಾನು ಮೈಪೂರ ಬೆವೆತು ಬಿಟ್ಟಿದ್ದೆ. ನನ್ನ ಪುಣ್ಯ. ನಾನು ವಾಕಿಂಗ್‌ಗೆ ಹೋಗುತ್ತಿದ್ದಾಗ ನನಗೆ ಎದುರಾಗಿದ್ದ ವ್ಯಕ್ತಿ ಜಗಳ ಮಾಡಿದ್ದರೇ ಹೊರತು ನನ್ನನ್ನು ಕೊಲ್ಲುವ ಮಟ್ಟಕ್ಕೆ ಬಂದಿರಲಿಲ್ಲ.

ನಾಯಿಯನ್ನು ಸಾಕುವವರದ್ದು ಒಂದು ವಿಚಿತ್ರ ನಿಯಮ ಇದೆ. ಅದೇನೆಂದರೆ ಅವರ ಸಾಕು ನಾಯಿಯನ್ನು ಉಳಿದವರು ನಾಯಿ ಎಂದು ಹೇಳಬಾರದು. ಬದಲಿಗೆ ಇಂಗ್ಲಿಷ್‌ನಲ್ಲಿ 'ಯುವರ್ ಪೆಟ್', 'ಯುವರ್ ಡಾಗಿ' ಅಂತೆಲ್ಲ ಹೇಳಿದರೆ ಅವರ ಮುಖ ಅರಳುತ್ತದೆ.

ನಾವು ಸಣ್ಣವರಿದ್ದಾಗ ನಾಯಿಗಳು ದೇಶೀ ತಳಿಗಳೇ ಇರುತ್ತಿದ್ದವು. ಅವುಗಳ ಹೆಸರು ಕೂಡ ಹಾಗೇ. ಜಾನಪದೀಯವಾಗಿಯೇ ಇರುತ್ತಿದ್ದವು. ನಾಯಿಗಳ ಮೈಬಣ್ಣವನ್ನು ಅನುಸರಿಸಿ ಕಾಳ ಕಾಳಿ, ಬೊಳ್ಳ ಬೊಳ್ಳಿ, ಕೆಂಪ ಕೆಂಪಿ ಹೀಗೆ. ಈಗ ನಾಯಿಗಳ ದೇಶೀ ತಳಿಗಳು ಹೆಚ್ಚಿನ ಕಡೆ ಕಂಡು ಬರುವುದೇ ಇಲ್ಲ. ಜರ್ಮನ್ ಶೆಫರ್ಡ್, ಗೋಲ್ಡನ್ ರಿಟ್ರೀವರ್, ಪೊಮೇರಿಯನ್, ಲ್ಯಾಬ್ ರಾಡಾರ್ ಹೀಗೆ ಹೆಚ್ಚಿನವು ವಿದೇಶೀ ತಳಿಗಳೇ ಜಾಸ್ತಿ. ಅವುಗಳ ಹೆಸರುಗಳು ಚಿತ್ರ ವಿಚಿತ್ರ. ರೆಕ್ಸ್, ರೋಕ್ಸಿ, ಅಂಬುಷ್, ಡೆರಿಕ್, ಜೆರ್ರಿ ಹೀಗೆ. ಅವುಗಳನ್ನು ಬೆಳಿಗ್ಗೆ ಅಥವಾ ಸಂಜೆ ವಾಕಿಂಗ್‌ಗೆ ಕರೆದುಕೊಂಡು ಹೋಗುವುದೇ ಒಂದು ಪ್ರೆಸ್ಟೀಜಿನ ಕೆಲಸ ಎಂದು ಭಾವಿಸುವ ಶ್ರೀಮಂತರು ಇದ್ದಾರೆ. ಅವುಗಳಿಗೆ ಮನೆಯಲ್ಲಿ ಮಾಡುವ ಆರೈಕೆಗಳೇನು, ಚಿತ್ರ ವಿಚಿತ್ರದ ಆಹಾರ ಪದ್ಧತಿಗಳೇನು, ಅವುಗಳಿಗೆ ಹಾಕುವ ದಿರಿಸು, ಕಲ್ಪಿಸುವ ಸವಲತ್ತು ಇತ್ಯಾದಿಗಳನ್ನು ಕಂಡಾಗ ಶ್ರೀಮಂತರ ಮನೆಯಲ್ಲಿ ನಾಯಿಯಾಗಿ ಇರಬಾರದಿತ್ತೇ ಎಂದು ಅನಿಸಿದರೆ ತಪ್ಪೇನು ಅಲ್ಲ.



ಎಷ್ಟೋ ಜನರಿಗೆ ನಾಯಿ ಕೇವಲ ನಾಯಿ ಅಲ್ಲ. ಅದು ಕುಟುಂಬದ ಸದಸ್ಯ. ಅದರೊಂದಿಗೆ ಊಟ, ಪಾಠ, ಆಟ, ಕೂಟ ಎಲ್ಲವೂ. ಒಂದು ಕ್ಷಣ ಕಣ್ಮುಂದೆ ಕಾಣದೇ ಇದ್ದರೆ ಪರಿತಪಿಸುವವರು ಇದ್ದಾರೆ.

ವಾಕಿಂಗಿಗೆ ನಾಯಿಗಳನ್ನು ಹಿಡಿದುಕೊಂಡು ಹೋಗುವಾಗ ಅದನ್ನೂ ಕೆಲವರು ಅಂತಸ್ತು ಎಂದು ಭಾವಿಸಿಕೊಳ್ಳುವುದಿದೆ. ಪರಸ್ಪರ ನಾಯಿಗಳನ್ನು ಹಿಡಿದುಕೊಂಡವರು ಎದುರುಬದುರಾದರೆ ತಮ್ಮ ನಾಯಿ ಹೇಗಿದೆ? ಎದುರಿಗಿರುವವರ ನಾಯಿ ಹೇಗಿದೆ? ಎಂದು ಕಣ್ಣಿನಲ್ಲೇ ತೌಲನಿಕ ಅಧ್ಯಯನ ಮಾಡಿಕೊಂಡು, ತಮ್ಮ ನಾಯಿ ಚೆನ್ನಾಗಿದ್ದರೆ ಸಂತೋಷಪಡುವವರು ಇದ್ದಾರೆ. ಕೆಲವು ಬಾರಿ ನಾಯಿಗಳು ಭಿನ್ನಮತೀಯರಾಗಿದ್ದಾಗ ಎದುರಾಗುವವರನ್ನು ಕಂಡು ತಮ್ಮ ಅಸಹನೆ ವ್ಯಕ್ತಪಡಿಸುವುದೂ ಇದೆ. ಆಗ ನಾಯಿಯ ಯಜಮಾನರುಗಳು ತಮ್ಮ ಡಾಗುಗಳನ್ನು ಸುಮ್ಮನಿರಿಸಲು ಶತ ಪ್ರಯತ್ನ ಪಡುವುದನ್ನು ಕಂಡು ಆ ನಾಯಿ ಮಾಲೀಕರ ಬಗ್ಗೆ ಅನುಕಂಪ ಮೂಡುವುದೂ ಇದೆ. ಕೆಲವು ಬಾರಿ ನಾಯಿಗಳು ತಮ್ಮ ಪ್ರಿಯತಮ ಪ್ರಿಯತಮೆಯರನ್ನು ಕಂಡಾಗ ಯಜಮಾನರ ಅಂಕೆಯಿಂದ ತಪ್ಪಿಸಿಕೊಂಡು 'ಎಲ್ಲಿರುವೇ ಮನವ ಕಾಡುವ ರೂಪಸಿಯೇ' ಎಂದೋ, ' ಬಾರೆ ಬಾರೆ ಚೆಂದದ ಚೆಲುವಿನ ತಾರೆ' ಎಂದೋ ಹಾಡುತ್ತ ಓಡಿ ಹೋಗುವುದೂ ಇದೆ. ಅಂಥ ಸಂದರ್ಭಗಳಲ್ಲಿ ನಾಯಿಯ ಯಜಮಾನರುಗಳು ಕೂಡ ತಮ್ಮ ತಮ್ಮ ನಾಯಿಗಳ ಬೆನ್ನ ಹಿಂದೆ ಓಡಬೇಕಾದ ಪರಿಸ್ಥಿತಿಯನ್ನು ಕಂಡು ಬೆರಗಾಗಿದ್ದೇನೆ. ಹಾಗೆಯೇ ನಾಯಿಗಳು ಅಟ್ಟಿಸಿಕೊಂಡು ಹೋಗಿ ಅದರ ಯಜಮಾನರುಗಳು ಕಕ್ಕಾಬಿಕ್ಕಿಯಾಗಿ ನಂತರ ನೀವು ನಿಮ್ಮ ನಾಯಿಯನ್ನು ಭದ್ರವಾಗಿ ಹಿಡಿದುಕೊಳ್ಳಬೇಕಿತ್ತು ಎಂದು ಪರಸ್ಪರ ದೋಷಾರೋಪಣೆ ಮಾಡುತ್ತ ಮಾತಿಗೆ ಮಾತು ಬೆಳೆದು ಕೋರ್ಟು ಕಚೇರಿ ಅಲೆದಾಡಬೇಕಾದ ಪ್ರಸಂಗ ಉಂಟಾದದ್ದನ್ನು ಗಮನಿಸಿದ್ದೇನೆ. ಎಲ್ಲ ಸಲವೂ ಜಗಳವೇ ಆಗಬೇಕಾಗಿಲ್ಲ. ಒಂದು ಅಪವಾದ ಪ್ರಸಂಗ ಇದು.



ನನ್ನ ಸಂಬಂಧಿಕರೊಬ್ಬರು ವಾಸಿಸುತ್ತಿದ್ದ ಬಡಾವಣೆಯಲ್ಲಿ ಬೆಳಗಿನ ಜಾವ ನಾಯಿ ಹಿಡಿದುಕೊಂಡು ಬಂದಿದ್ದ ಮಧ್ಯ ವಯಸ್ಸಿನ ಓರ್ವ ಗಂಡು ಮತ್ತು ಓರ್ವ ಹೆಂಗಸಿನ ನಾಯಿಗಳು ಮುಖಾಮುಖಿ ಆದೊಡನೆ ಯಜಮಾನರ ಕೈಯಿಂದ ತಪ್ಪಿಸಿಕೊಂಡು ಪರಾರಿಯಾದವು. ಮೊದಲು ಇಬ್ಬರೂ ಸ್ವಲ್ಪ ಬೈದಾಡಿಕೊಂಡರಂತೆ. ಅದು ಕೂಡ ಇಂಗ್ಲಿಷ್‌ನಲ್ಲಿಯೇ. ಆ ಗಂಡಸಿಗೆ ಹೆಂಗಸು ಬಳಸುತ್ತಿದ್ದ ಅತ್ಯುತ್ತಮ ಇಂಗ್ಲಿಷ್ ಕೇಳಿ ಬೆರಗಾಯಿತಂತೆ. ಅವರ ಭಾಷಾ ಪಾಂಡಿತ್ಯವನ್ನು ಮೆಚ್ಚಿ ಹೊಗಳಿದನಂತೆ. ನಾಯಿಗಳು ಮರಳಿ ಬಂದು, ಅವುಗಳ ಸಮಸ್ಯೆಯನ್ನು ಸೌಹಾರ್ದಯುತವಾಗಿ ಪರಿಹರಿಸಿಕೊಂಡರಂತೆ. ನಂತರ ಅದೇ ಪರಿಚಯ ಗಾಢವಾಗುತ್ತ ಹೋಯಿತು. ಆಕೆ ವಿಚ್ಛೇದಿತೆ. ಅವನ ಹೆಂಡತಿ ತೀರಿಕೊಂಡಿದ್ದರು. ಪರಸ್ಪರ ಒಪ್ಪಿಗೆಯ ಮೇರೆಗೆ ಮದುವೆಯೂ ಆದರಂತೆ. !

ಮನೆಯ ಮುಂದೆ 'ನಾಯಿ ಇದೆ ಎಚ್ಚರಿಕೆ' ಎಂದು ಬೋರ್ಡ್ ಹಾಕುವುದೂ ಕೂಡ ಒಂದು ಘನತೆಯ ಪ್ರಶ್ನೆ ಎಂದು ಭಾವಿಸುವವರು ಇದ್ದಾರೆ. ದೊಡ್ಡಮನೆ, ಅದು ಕಾಣದಿದ್ದಷ್ಟು ಎತ್ತರದ ಕಾಂಪೌಂಡು, ಮನೆಗಿಂತ ಎತ್ತರದ ಗೇಟು, ಆ ಗೇಟಿನಲ್ಲಿ ನಾಯಿಯ ಚಿತ್ರ ಹಾಕಿದ ಫಲಕ ಇಷ್ಟು ಇದ್ದರೆ ತಾವು ಆಗರ್ಭ ಶ್ರೀಮಂತರು ಎಂದು ಎಲ್ಲರೂ ಅಂದುಕೊಳ್ಳುತ್ತಾರೆ. ಲೋಕದ ಕಣ್ಣಿಗೆ ತಾವು ಹೀಗಿದ್ದರೆ ಗ್ರೇಟ್ ಎಂದು ಭಾವಿಸುವವರು ಇದ್ದಾರೆ. ಒಂದಕ್ಕಿಂತ ಹೆಚ್ಚು ವಿದೇಶಿ ತಳಿಗಳ ನಾಯಿಗಳನ್ನು ಸಾಕುವುದು, ಅವುಗಳನ್ನು ಮೆರೆಸುವುದು ತಮ್ಮ ಘನತೆಗೆ ತಕ್ಕದಾದ ರೀತಿ ಎಂದು ಅನೇಕರು ಭಾವಿಸಿಕೊಳ್ಳುವುದಿದೆ.

ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ನನ್ನ ಗೆಳೆಯನ ಮನೆಗೆ ಹೋಗಿದ್ದಾಗ ನನಗೆ ಒಂದು ಅನುಭವ ಆಗಿತ್ತು. 'ನೀನು ಮನೆಗೆ ಬರುವ ಮೊದಲು ನನಗೆ ಫೋನ್ ಮಾಡಿ ಬಾ. ಮನೆಯಲ್ಲಿ ನಾಯಿ ಇದೆ. ಶಬ್ದ ಮಾಡದೇ ಗೇಟು ತೆರೆಯಬೇಡ' ಎಂದು ನನಗೆ ತಾಕೀತು ಮಾಡಿದ್ದ. ಹಾಗೆಯೇ ನಾನು ಒಂದು ಮಧ್ಯಾಹ್ನದ ಹೊತ್ತು ಅವನ ಮನೆಗೆ ಹೋದೆ. ಗೇಟು ಸ್ವಲ್ಪವೇ ತೆರೆದಿತ್ತು. ಆದರೆ ಗೇಟಿನಲ್ಲಿ ನಾಯಿ ಇದೆ ಎಚ್ಚರಿಕೆ ಫಲಕ ಇರಲಿಲ್ಲ. ನನಗೋ ಭಯ. ಗೇಟು ಸ್ವಲ್ಪ ಸದ್ದು ಮಾಡಿದೆ. ಯಾರೂ ಹೊರಗೆ ಬರಲಿಲ್ಲ. ಅಂಗಳದಲ್ಲಿ, ಕಾಂಪೌಂಡಿನ ಒಳಗೆ ಎಲ್ಲಿಯೂ ನಾಯಿ ಇದ್ದ ಕುರುಹು ಕಾಣಲಿಲ್ಲ. ಮೆಲ್ಲನೆ ಗೇಟು ತೆರೆದು ಒಳಗೆ ಹೆಜ್ಜೆ ಇಟ್ಟೆ. ಬೆಲ್ಲು ಮಾಡಿದೆ. ಒಳಗಿನಿಂದಲೇ ಯಾರು ಎಂದು ಕೇಳಿದ. ನಾನು ಬಂದಿದ್ದೇನೆ ಎಂದು ಪರಿಚಯ ಹೇಳಿಕೊಂಡೆ. ಬಾಗಿಲು ತೆಗೆದ ಗೆಳೆಯ, ಒಳ ಬದಿ ನೋಡುತ್ತಾ 'ಹರ್ಕ್ಯೂಲಿಸ್ ಹೊರಗೆ ಬರಬೇಡ' ಎಂದು ಹೇಳಿದ. ನಾನು ನಾಯಿಯ ಹೆಸರು ಕೇಳಿಯೇ ಭಯಗೊಂಡೆ. ಗ್ರೀಕ್ ಪುರಾಣದಲ್ಲಿ ಬರುವ ದೈತ್ಯನೊಬ್ಬನ ಹೆಸರು ಅದು. ಹೆಸರೇ ಹಾಗಿದ್ದರೆ ಇನ್ನು ನಾಯಿ ಹೇಗಿರಬಹುದು ಎಂದು ಭಯ ಮತ್ತಷ್ಟು ಹೆಚ್ಚಾಯಿತು. ನಾನು ಅವನೊಡನೆ ಮಾತನಾಡುವಷ್ಟು ಹೊತ್ತು ನೆಮ್ಮದಿಯಲ್ಲಿ ಇರಲಿಲ್ಲ.

'ನಾಯಿ ಒಳಗಡೆ ಇದೆ ನೀನು ಭಯಗೊಳ್ಳಬೇಡ' ಎಂದು ಆತ ಭರವಸೆ ಕೊಟ್ಟಿದ್ದ. ಆದರೂ ನಾಯಿ ಬೊಗಳುವ ಸದ್ದು ಕೇಳುತ್ತಿರಲಿಲ್ಲ. ಬೊಗಳುವ ನಾಯಿ ಕಚ್ಚುವುದಿಲ್ಲ ಎಂಬ ಮಾತು ಇದೆ. ಇದು ಮೌನವಾಗಿದೆ. ಅಂದರೆ ಗ್ಯಾರಂಟಿ ಕಚ್ಚುತ್ತದೆ ಎಂದು ಲೆಕ್ಕ ಹಾಕಿದ್ದೆ. ಸ್ವಲ್ಪ ಹೊತ್ತು ಅದು ಇದು ಮಾತನಾಡುತ್ತಾ ಇದ್ದೆ. ಅವನ ಹೆಂಡತಿ ಜ್ಯೂಸ್ ತಂದುಕೊಟ್ಟಳು. ವಿರಾಮವಾಗಿ ಕುಡಿಯುತ್ತ ಇದ್ದಂತೆ ಒಮ್ಮೆಲೆ ಆತ 'ಹರ್ಕ್ಯುಲಿಸ್ ಬರಬೇಡ ಅಂದ್ರೂ ಬಂದಿಯಾ'? ಎಂದ. ನಾನು ಗಾಬರಿಯಿಂದ 'ಎಲ್ಲಿ ನಾಯಿ'? ಎಂದು ಅತ್ತಿತ್ತ ನೋಡಿದೆ. 'ಇಗೋ ಇಲ್ಲಿ!' ಎಂದು ನನ್ನ ಕಾಲ ಬುಡ ತೋರಿಸಿದ. ನೋಡುತ್ತೇನೆ, ಮೈತುಂಬ ರೋಮ ಹೊತ್ತ ಕಣ್ಣು ಪೂರ್ತಿ ಮುಚ್ಚಿದ ಗೊಂಬೆಯಂತಿರುವ ಸಣ್ಣ ನಾಯಿಮರಿ! ಥುತ್ ಇದಕ್ಕೆ ಹರ್ಕ್ಯೂಲಿಸ್ ಎಂದು ಹೆಸರು ಇಟ್ಟು ಆ ವೀರನಿಗೆ ಅವಮಾನ ಮಾಡಿದಂತಾಯಿತು ಎಂದು ಭಾವಿಸಿದೆ.

ನಾಯಿ ಎನ್ನುವ ಶಬ್ದಕ್ಕೆ ಸೊಣಗ, ಕುನ್ನಿ, ಶ್ವಾನ ಹೀಗೆ ಪರ್ಯಾಯ ಪದಗಳಿವೆ.